Reg No. B G 155 9-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕಮ್ಯುನಿಸ್ಟ್ ಪಕ್ಷಗಳ ನಿಷೇಧಕ್ಕೆ ರಾಜಾಜಿ ಕರೆ

ದುಷ್ಕೃತ್ಯ

★

ಕಲ್ಕತ್ತಾ— ಆಡಳಿತಪಕ್ಷ ಸಂಯುಕ್ತ ರಂಗದ ಬೆಂಬಲಿಗರೂ ವಿದ್ಯಾರ್ಥಿಗಳೂ ಸ್ಟೇಟ್ಸ್‌ಮನ್ ಮತ್ತು ಎ ಬಿ ಪತ್ರಿಕಾ ಕಚೇರಿಗಳ ಮೇಲೆ ಧಾಳಿ ಮಾಡಿ ನಷ್ಟ ನಷ್ಟಪಡಿಸಿದರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೆಂಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ-ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರವಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ಸರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಕಾಂಗ್ರೆಸ್ ಅಧ್ಯಕ್ಷರು

ಬೆಂಗಳೂರು— ಬೊಂಬಾಯಿನಿಂದ ಇಲ್ಲಿಗೆ ನಿನ್ನೆ ಬಂದ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು – ಎಂ ಪಿ ಸಿ ಸಿ ಅಧ್ಯಕ್ಷ ಡಾ || ನಾಗಪ್ಪ ಆಳ್ವಾರರೂ, ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ ಮತ್ತಿತರರೂ ಹಾರ ಹಾಕಿದರು.

★

ಕೇಂದ್ರ ತಂತಿ ಕಚೇರಿ ವರ್ಗಾವಣೆ

ಮೈಸೂರು— ನಗರದ ಕೇಂದ್ರ ತಂತಿ ಕಚೇರಿಯನ್ನು ಸರಿಯಾಗಿಲ್ಲದ ಸ್ಥಳಕ್ಕೆ ಬದಲಾಯಿಸಿರುವ ಬಗ್ಗೆ ನಿನ್ನೆ ಪೌರಸಭೆಯಲ್ಲಿ ಕುಟುಂಬಾಗಿ ಟೀಕಿಸಲಾಯಿತು.

★

ನೀರಿನ ರೇಷನ್

ಮೈಸೂರು— ಉತ್ತರ ಆರ್ಕಾಟು ಜಿಲ್ಲೆಯ ಅರಣಿ ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದ್ದು, ನೀರಿನ ರೇಷನ್ ಜಾರಿಗೆ ತರಲಾಗಿದೆ – ಪ್ರತಿ ಸಂಸಾರಕ್ಕೆ ದಿನ ಬಿಟ್ಟು ದಿನ ಎರಡು ಮಡಿಕೆ ನೀರು ಕೊಡಲಾಗುವುದು — ಊರಿನ ಜನಸಂಖ್ಯೆ 37000.

★

ನೀರಾವರಿ ಅಯೋಗ

ಬೆಂಗಳೂರು— ನೀರಾವರಿ ಆಯೋಗದ ಅಧ್ಯಕ್ಷ ಶ್ರೀ ಎ ಪಿ ಜೈರ್ ರು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೊಡನೆ ರಾಜ್ಯದ ನೀರಾವರಿ ಸಮಸ್ಯೆ ಬಗ್ಗೆ ಮಾತುಕತೆ ನಡೆಸಿದರು

●

ತಟಸ್ಥ ರಾಷ್ಟ್ರಗಳ ಸಮ್ಮೇಳನ

ಬೆಲ್ಗ್ರೇಡ್— 51 ತಟಸ್ಥ ದೇಶಗಳ ಸಮ್ಮೇಳನವನ್ನು ನಿನ್ನೆ ಯುಗೊಸ್ಲೊವಿಯಾ ಪ್ರಧಾನಿ ಮಿತ್ಯಾರಿ ಬಿಚಿಕ್ ಉದ್ಘಾಟಿಸಿದರು – ಇದರಲ್ಲಿ ಪಾಕಿಸ್ತಾನವಿಲ್ಲ.

ಜಾಡಮಾಲಿಗಳ ಮುಷ್ಕರ

ಮೈಸೂರು— ನಿನ್ನೆ ಪ್ರಾರಂಭವಾದ ಜಾಡಮಾಲಿಗಳ ಮುಷ್ಕರ ಬಗ್ಗೆ ರಾತ್ರಿ ಪುರಸಭಾಧ್ಯಕ್ಷರು ಪುರಸಭೆ ಕೆಲಸಗಾರರ ಸಂಘದ ಮುಖಂಡರು ಮತ್ತು ಕಾರ್ಮಿಕ ರೊಡನೆ ನಡೆಸಿದ ಮಾತುಕತೆ ಫಲವಾಗಿ ಮುಷ್ಕರ ನಿಂತು ಕೆಲಸಕ್ಕೆ ಹಾಜರಾದರು.

★

ರಾಷ್ಟ್ರಾಧ್ಯಕ್ಷತೆಗೆ

ನವದೆಹಲಿ— ನಭಾದ 65 ವರ್ಷದ ವಿಧವೆ ರಾಷ್ಟ್ರಾಧ್ಯಕ್ಷತೆಗೆ ಸ್ಪರ್ಧಿಯಾಗಿದ್ದಾರೆ.

★

ಔರಂಗಜೇಬಿನ ಅಪರಾವತಾರ

ಕಲ್ಲೀಕೋಟೆ— ಕೇರಳ ಮುಸ್ಲಿಂ ಲೀಗ್ ವಿದ್ಯಾಮಂತ್ರಿ ಮಹಮದ್ ಕೊಯಾರು ಔರಂಗಜೇಬಿನ ಅಪರಾವತಾರವೆಂದು ಜನಸಂಘದ ಕಾರ್ಯದರ್ಶಿ ರಾಜಗೋಪಾಲನರು ಹೇಳಿದರು – ಕೊಯಾರು ಸಂಸ್ಕೃತ ಹಿಂದಿ ಮತ್ತಿತರ ರಾಷ್ಟ್ರೀಯ ಭಾಷೆಗಳನ್ನು ಕಲಿಯಲು ನಿರುತ್ಸಾಹಗೊಳಿಸಿ ಅರಾಬಿಕ್ ಭಾಷೆ ವ್ಯಾಸಂಗವನ್ನು ಹೆಚ್ಚು ಪುಷ್ಟೀಕರಿಸುತ್ತಿರುವರೆಂದು ಹೇಳಿದರು – ನೀಲಂಬೂರಿನ ಒಂದು ಹೈಸ್ಕೂಲನ್ನು ಒಬ್ಬ ದಾನಿಯು ಸರಕಾರಕ್ಕೆ ವಹಿಸಿ, ಅಲ್ಲಿ ಸಂಸ್ಕೃತ ವ್ಯಾಸಂಗಕ್ಕಾಗಿ ಹೆರಳ ಹಣ ಕೊಟ್ಟಿದ್ದರೂ, ಸಂಸ್ಕೃತವನ್ನು ಅಲಕ್ಷಿಸಿ, ಸಂಸ್ಕೃತ ಓದಲು ಇಚ್ಛಿಸುವರನ್ನು ಅರಾಬಿಕ್ ತರಗತಿಗೆ ಹೋಗಲು ಬಲಾತ್ಕರಿಸಲಾಗುತ್ತಿದೆಯೆಂದೂ ಅವರು ಹೇಳಿದರು.

★

ನಕ್ಸಲೈಟರ ಬಂಧನ

ಹೈದರಾಬಾದು— ಡಯಲುಮಡುಗು ಗ್ರಾಮದ ಹತ್ತಿರ ಓತುಕೊಂಡಿದ್ದ 8 ನಕ್ಸಲೈಟರನ್ನು ಪೋಲೀಸರು ಬಂಧಿಸಿದರು.

ಕಮ್ಯುನಿಸ್ಟ್ ಪಾರ್ಟಿಗಳು

ಮದರಾಸು— ಸ್ವತಂತ್ರ ಪಕ್ಷ ಸ್ಥಾಪಕ ನಾಯಕ ಶ್ರೀ ರಾಜಗೋಪಾಲಾಚಾರಿಯವರು ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳನ್ನೂ ಪ್ರತಿಬಂಧಿಸಬೇಕೆಂದು ಮತ್ತೆ ಹೇಳಿದರು.

★

ಮಾಲಾಪುರ ಚಳವಳಿ

ಕಲ್ಲೀಕೋಟೆ— ಸರಕಾರಿ ಕಚೇರಿ ಮುಂದೆ ಘೋಷಣೆ ಕೂಗುತ್ತಿದ್ದವರ ಮೇಲೆ ಪೋಲೀಸರು ಮಾಡಿದ ಲಾಠಿಚಾರ್ಜ್ ನಿಂದ 7 ಮಂದಿ ಗಾಯಗೊಂಡರು – ಚಳವಳಿಯಲ್ಲಿ ಭಾಗವಹಿಸಲು ಬಂಟವಾಳ, ಪುತ್ತೂರು, ಕಡಬಾದಿಂದ 30 ಮಂದಿ ಸ್ವಯಂಸೇವಕರೂ, ಉತ್ತರ ಕನಡಾದಿಂದ 10 ಮಂದಿಯೂ ಹೊರಟಿರುವರು.

★

ಭಿಕ್ಷುಕರ ಸ್ವರ್ಗ

ಕಲ್ಕತ್ತಾ— ಊರಿನ 210 ರಸ್ತೆ ಪಕ್ಕದ ಕಾಲುದಾರಿಯಲ್ಲಿ ಮಲಗಿ ನಿದ್ರಿಸುವವರಿಗೆ ರಾತ್ರಿ ನೆಲೆಸಲು ರೂ 2.87 ಲಕ್ಷ ಖರ್ಚಿನಲ್ಲಿ ನಾಲ್ಕು ಅಂತಸ್ತಿನ ಕಟ್ಟಡ ಕಟ್ಟಲು ಯೋಜಿಸಲಾಗಿದೆ ಎಂದೂ, ಊರಿನಲ್ಲಿ 30000 ಭಿಕ್ಷುಕರಿರುವರೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು.

●

ಮೃತ್ಯುಪಾಲು

ಹೈದರಾಬಾದು— ಡಮಲಗೋಡಾ ಪೋಲೀಸರು, ಕಲ್ಲುಬೀರಿದ ಆಪಾದನೆಗೆ ಬಂಧಿಸಿ ಜಾವಣಿಯಿಲ್ಲದ ಲಾಕಪ್ಪಿನಲ್ಲಿಟ್ಟಿದ್ದ ಒಬ್ಬ ಚಳವಳಿಗಾರನು ಗೋಡೆ ಹಾರಿ ರಸ್ತೆಗೆ ಧುಮಿಕಿದ ಸಮಯದಲ್ಲೇ ಜೋರಾಗಿ ಬರುತ್ತಿದ್ದ ಮೋಟಾರಿಗೆ ಸಿಕ್ಕಿ ಮೃತಪಟ್ಟನು.

★ ಮೈಸೂರು— ಈ ತಿಂಗಳಿಂದ ಸಕ್ಕರೆ ಕೋಟಾವನ್ನು ಕಾಡು-ವಾರಿಗೆ ಯೂನಿಟ್‌ಗೆ 500 ಗ್ರಾಂನಂತೆ ಕೊಡಲಾಗುವುದು

ಶೋಧನೆ

ಶಾರದಾ

ಓ ! ನನ್ನ ದೇವಾ !

ನಾನೆಲ್ಲೊ ಹುಡುಕಿರಲು ನೀನೆಲ್ಲೊ ಅಡಗಿದ್ದೆ
ನಾ ನಿನ್ನ ಕರೆದಿರಲು ನೀ ಸುಮ್ಮನಾಗಿದ್ದೆ
ಮೆರವ ದೇಗುಲದಲ್ಲಿ ನಾ ನಿನ್ನ ಪೂಜಿಸಿದೆ
ಮುರುಕು ಗುಡಿಸಿಲಿನಲ್ಲಿ ನೀ ಹೋಗಿ ನಿಂತಿದ್ದೆ

ಲಕ್ಷ ದೀಪವ ಬೆಳಗಿ ನಿನ್ನ ನಾನರಸುತಿದೆ
ಭಿಕ್ಷುಕರ-ಭುಜವಿಡಿದು ನೀ ಸಾಗಿ ಹೋಗಿದ್ದೆ
ಬಣ್ಣ ಬಣ್ಣದ ಹೂವ ಹೆಣೆದು ನಾ ತಂದಿರಲು
ಸಣ್ಣವರ ತುಟಿಯಲ್ಲಿ ಅರಳಿ ನೀ ನಗುತಿದ್ದೆ

ಸಂಗೀತ ನರ್ತನದಿ ರಮಿಸಲಾನಾಶಿಸಲು
ಅಂಗವಿಕಲರ ಸಂಗ ಲೀಸೆಂದು ನೀ ಬಗೆದೆ
ಯೋಗ ತಪದಿಂ ನಿನ್ನ ಪಡೆದೆ ತೀರುವೆನ್ನೆಂದೆ
ರೋಗಿ ಮಂಚದ ಮೇಲೆ ಕದಲದೇ ನೀ ನಿಂದೆ

ದೆಸೆದೆಸೆಗೆ ದಿಕ್ಕೆಟ್ಟು ಧಾವಿಸಿದೆ ನಿನಗಾಗಿ
ಬೆಸಿಲು ಕುದುರೆಯ ಕಂಡ ಪಯಣಿಗನು ನಾನಾಗಿ

ಅಂತರಾತ್ಮ !

ಎಲ್ಲನೀರು ನೀರಡಿಸಿ ಹೊಳೆಗುರುಳುವಾ ತೆರದಿ
ಒಳಗಿರುವ ನಿನ್ನಿರುವ ತಿಳಿಯದಲಿ ಮರುಳಾದೆ

— ಕನ್ನಡ ನುಡಿ

ಗುಲಾಮರ ವಾರಾಟ

ಬೊಗೋಟೊ — ಕೊಲಂಬಿಯಾದವೋಪಿ ಭಾಗದಲ್ಲಿ ಇಬ್ಬರು ವ್ಯಾಪಾರಿಗಳು 75 ಅಮೇರಿಕಾ-ಇಂಡಿಯನ್ನರನ್ನು ಗುಲಾಮರನ್ನಾಗಿ 28000 ಡಾಲರುಗಳಿಗೆ ಮಾರಿರುವರೆಂದು ವರದಿಯಾಗಿದೆ.



Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್

4-7-69 ರಿಂದ

ಅಮೋಘ ಆರಂಭ

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿ ರಾತ್

ಸಂಗೀತ — ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್
ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಆಪೆರಾ — ಅಮೋಘ 2 ನೇ ವಾರ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕ್ಕಳೇ ಮನೆಗೆ ಮಾಣಿಕ

ರ ಶಿ

ನಟವರ್ಗ— ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮಿ
ಶೈಲಶ್ರೀ, ಜಯ, ದಿನೇಶ್, ಮಾಸ್ಟರ್, ಕೃಷ್ಣಕುಮಾರ್, ಬೇಬಿ ಪ್ರತಿಮಾ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore, and other personages have extended messages of felic tations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basavial Sri Madhav Shenoi, Sri Opera Talkies, Padmabhushana D M.C. Modi, Dr. R. S. Nanjunda Swamy (Glasgow) S Ananthanarasimha Iyengar (Honganur) have generously extend ed donations and best wishes.

It iswelknown that golden jubilee of newspapers in Ind is rare and almost unknown in Mysore state. The Prin Minister has expressed that it is no small achievement.

Hearty cooperation, extending of messages and donatio and gracing the occasion with presence, are fervently solicit with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata V S Krishna Rao (Proprietor) at the Satyavadi Press Chamarajapuram, Mysore 4